ರೆಕ್ಕೆಗಳನ್ನು ಬಿಡಿಸಿ ನೀಲಿಯಾಗಸದಲ್ಲಿ ಹಾರಾಡುವುದು ಮನುಷ್ಯನಿಗೆ ಸಾಧ್ಯವಾಗದು.

ಮನುಷ್ಯನ ಬದುಕಿಗೆ ಬೇಲಿಗಳು ಹಲವು.

ಅಬಾರ್ಶನ್ ಮಾಡಬಾರದು ಎಂದುಕೊಂಡಳು ಕುಂದಾ.

ಈ ನಿರ್ಣಯಕ್ಕೆ ಸಮ್ಮತಿಸಿದರೆ ಹಲವು ಪ್ರಶ್ನೆಗಳು ಎದ್ದು ನಿಲ್ಲುತ್ತಿದ್ದವು. ಸದ್ದು ಮಾಡುತ್ತಾ ನಾಲ್ಕೂ ದಿಕ್ಕಿನಿಂದ ಸುತ್ತುವರಿಯುತ್ತಿದ್ದವು.

ಬಂಧಮುಕ್ತರಾಗಿ ಬದುಕುವ ಜನರ ಮನೋವೃತ್ತಿ ವಿಭಿನ್ನವಾಗಿ ಇರುತ್ತದೆ. ಬಂಧನವನ್ನು ನಿರಾಕರಿಸುವ ಅವರ ಮನಸ್ಸಿನ ಚಿಂತನೆಗಳು, ಯಾರನ್ನೂ ಗಣನೆಗೆ ತಂದುಕೊಳ್ಳದಿರುವುದು... ಆದರೆ ಕುಂದಾ ಮತ್ತು ಕವಳೆಕಾರ ಆ ಗುಂಪಿಗೆ ಸೇರಿದವರಲ್ಲ. ಪ್ರವಾಹದ ವಿರುದ್ಧ ಈಜುವ ಎದೆಗಾರಿಕೆ ಆ ಇಬ್ಬರಲ್ಲಿಯೂ ಇಲ್ಲ.

ಈಗ ಏನು ನಡೆದಿರುವುದೋ ಅದು ಕೂಡ ನಡೆಸಬೇಕೆಂದು ನಡೆಸಿರುವುದು ಅಲ್ಲ. ದೈಹಿಕ ತೃಷೆಯನ್ನು ತಡೆದುಕೊಳ್ಳುವುದು ಸಾಧ್ಯವಾಗಲಿಲ್ಲ. ಹೀಗಾಗಿಯೇ ಮನಸ್ಸು ಸ್ಥಿಮಿತದಲ್ಲಿ ಇಲ್ಲದಿದ್ದಾಗ ಮರ್ಯಾದೆ ಅಂಕೆ ಮೀರಿತು. ಒಮ್ಮೆ ಘಟಿಸಿತು, ಆಮೇಲೆ ಘಟಿಸುತ್ತಾ ಹೋಯಿತು.

ಸಮಾಜದ ಅದೃಶ್ಯ ಬಂಧನವನ್ನು ಕಡೆಗಣಿಸುವ ಧೈರ್ಯ ಅವರಲ್ಲಿ ಇಲ್ಲ. ಅಂತಹ ಜನರು ಸಿನಿಮಾದಲ್ಲಿ ಇರುತ್ತಾರೆ. ಆದರೆ ಇವರು ಹಾಗಿನವರಲ್ಲ.

ಕವಳೆಕಾರನ ಸಂಸಾರವನ್ನು ಮುರಿಯುವ ಆಲೋಚನೆಯನ್ನು ಅವರು ಮಾಡಲಾರರು.

ಅಮ್ಮನ ಜೊತೆ ಇರಲು ಗೋವೆಗೆ ಹೋಗುವ ಹಾಗಿಲ್ಲ. ಅವಳಿಗೆ ಗೊತ್ತಾದರೆ ಅವಳು ಜೀವ ಕಳೆದುಕೊಳ್ಳುವಳು.

ಅಲ್ಲದೆ ಕುಂದಾಳನ್ನು ಜರಿಯುವ ಎಲ್ಲ ಪ್ರಶ್ನೆಗಳು ಅವಳ ಹಿಂದೆಯೇ ಗೋವೆಗೆ ಹೋಗುತ್ತವೆ. ಸಮಾಜ ಆಕಾಶವಾಗಿ ಎಲ್ಲೆಡೆ ಪಸರಿಸಿಕೊಂಡಿದೆ. ಹಳೆ ವಿಚಾರಗಳ, ಸಾವಿರ ಮುಖಗಳ ಯುಗ ಯುಗಗಳ ಬಳಿಕ ಅಲ್ಪಸ್ವಲ್ಪ ಬದಲಾವಣೆಯನ್ನು ತನ್ನದಾಗಿಸಿಕೊಂಡಿರುವ, ಎಲ್ಲರ ಮೇಲೆ ಕಣ್ಣಿಡುವ ಹಿರಿಯನಂತಿರುವ ಸಮಾಜ!

ಏನೇ ಹೇಳಿ, ಬಂಧನ ನಿಷ್ಠೆ ಬೇಕೇ ಬೇಕು. ಇಲ್ಲದಿದ್ದರೆ ಎಡಬದಿಯಿಂದ ಪುಂಡಾಟದ ಪ್ರಯಾಣ ಪ್ರಾರಂಭಗೊಳ್ಳುತ್ತದೆ. ದಾರಿ ವಕ್ರವಾಗುತ್ತಾ ಹೋಗುವುದು..

ಅಬಾರ್ಶನ್ ಮಾಡಿಕೊಳ್ಳುವ ಸರಳ ಮಾರ್ಗವಿದೆ. ಆದರೆ ಅದಕ್ಕೆ ಕುಂದಾ ಸಿದ್ಧಳಿಲ್ಲ.

"ಬೇರೆ ಏನಾದರೂ ಪರ್ಯಾಯ ಹುಡುಕೋಣ" ಅವಳು ಕವಳೆಕಾರನಲ್ಲಿ ಹೇಳಿದಳು.

"ಬೇರೆ ಪರ್ಯಾಯವೆಂದರೆ ನೀನು ಆದಷ್ಟು ಬೇಗ ಮದುವೆ ಮಾಡಿಕೊಳ್ಳುವುದು." ಕವಳೆಕಾರ ಆಲೋಚಿಸಿ ಹೇಳಿದ. ಅವನಿಗೆ ದೇಸಾಯಿಯ ನೆನಪು ಬಂತು.

"ದೇಸಾಯಿ ನಿನ್ನಲ್ಲಿ ಮದುವೆಯ ವಿಚಾರವಾಗಿ ಕೇಳಿದ್ದ ಅಲ್ಲವೇ?"

"ಹೌದು, ಆದರೆ ನಾನು ಅವನಿಗೆ ನಿರಾಕರಿಸಿದ್ದೆ."

"ಈಗ ನೀನೇ ಸ್ವತಃ ಹೋಗಿ ಅವನನ್ನು ವಿಚಾರಿಸು. ಅವನು ಒಪ್ಪಿದರೆ ಎಲ್ಲ ಪರಿಹಾರವಾಗುತ್ತದೆ."

"ಆದರೆ ಅವನಿಗೆ ಈ ವಿಷಯ ತಿಳಿಸಿದರೆ ಅವನು ಒಪ್ಪಿಕೊಳ್ಳುವ ಹಾಗೆ ಕಾಣುವುದಿಲ್ಲ."

"ಹೇಳುವ ಆವಶ್ಯಕತೆ ಏನಿದೆ?"

"ವಂಚಿಸಿ ಮದುವೆಯಾಗುವುದೇ?"